ಸುದ್ದಿ ಕಾರ್ನರ್

ಭಗವದ್ಗೀತಾ ಅಧ್ಯಯನ ಕಂಠ ಪಾಠ ಸ್ಪರ್ಧೆ

ವಿಜಯಪುರ: ಇಲ್ಲಿನ ನಿಂಬರಗಿ ಬಡಾವಣೆಯಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಡಿ. 24ರಂದು ಗೀತಾ ಅಧ್ಯಯನ ಕಂಠಪಾಠ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಕುಮುದಿನಿ ಫೌಂಡೇಷನ್ ವಿಜಯಪುರ ಶಾಖೆ ಮತ್ತು ಶ್ರೀ ವ್ಯಾಸಮಧ್ವ ಸಂಸ್ಕೃತ ವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಸ್ಪರ್ಧೆ ನಡೆಯಲಿದೆ. ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢ ಶಾಲೆ ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ ಮೂರು ಹಂತದಲ್ಲಿ ಸ್ಪರ್ಧೆ ನಡೆಯಲಿದೆ. ಆಸಕ್ತರು ಡಿ.20 ರೊಳಗಾಗಿ ಹೆಸರು ನೋಂದಾಯಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ. 9480630800 ಅಥವಾ 9880106116 ಸಂಪರ್ಕಿಸಬಹುದು.

» 24ರಿಂದ ವೆಂಕಟೇಶ್ವರ ದೇವಸ್ಥಾನದಲ್ಲಿ ಆಯೋಜನೆ

ಸಂಗನಬಸವ ಸ್ವಾಮೀಜಿ ಹೇಳಿಕೆ | ಹಳೆಯ ವಿದ್ಯಾರ್ಥಿಗಳ ಸಂಘದ ಸ್ನೇಹ ಸಮಾಗಮ

ಆಯುರ್ವೇದ ವಿಶ್ವದೆಲ್ಲೆಡೆ ಜನಪ್ರಿಯ

■ ವಿಜಯವಾಣಿ ಸುದ್ದಿಜಾಲ ವಿಜಯಪುರ

ಭಾರತೀಯ ಪುರಾತನ ವೈದ್ಯ ಪದ್ಧತಿ ಆಯುರ್ವೇದ ಈಗ ವಿಶ್ವದೆಲ್ಲೆಡೆ ಜನಪ್ರಿಯವಾಗಿದೆ ಎಂದು ಯರನಾಳ ಮತ್ತು ಉಕ್ಕಲಿ ವಿರಕ್ತಮಠದ ಶ್ರೀಗುರು ಸಂಗನಬಸವ ಸ್ವಾಮೀಜಿ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಭಾನುವಾರ ಹಮ್ಮಿಕೊಂಡ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ಸ್ನೇಹ ಸಮಾಗಮ- 2023 ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ವೈದ್ಯರು ನಮ್ಮ ಭಾರತೀಯ ಪುರಾತನ ವೈದ್ಯ ಪದ್ಧತಿಯಾಗಿರುವ ಆಯುರ್ವೇದವನ್ನು ಜನಸಾಮಾನ್ಯರಿಗೆ ತಲುಪಿಸಬೇಕು. ಈ ಕ್ಷೇತ್ರದಲ್ಲಿರುವ ಚಿಕಿತ್ಸಾ ವಿಧಾನಗಳನ್ನು ಹೆಚ್ಚೆಚ್ಚು ಪ್ರಚಾರ ಮಾಡುವ ಮೂಲಕ ತಾವೂ ಕೂಡ ಬೆಳೆಯಬೇಕು. ಬಿಎಲ್‌ಡಿಇ ಸಂಸ್ಥೆಯ ಸಂಸ್ಥಾಪಕ, ವಚನಪಿತಾಮಹ ಡಾ. ಫ.ಗು. ಹಳಕಟ್ಟಿ, ಪೂಜ್ಯ ಬಂಥನಾಳ ಸ್ವಾಮೀಜಿ, ಬಿ. ಬಿ.ಎಂ. ಪಾಟೀಲ ಅವರ ಆಶೀರ್ವಾದದಿಂದ ಬಿಎಲ್‌ಡಿಇ ಸಂಸ್ಥೆ ಮತ್ತು ಆಯುರ್ವೇದ ಮಹಾವಿದ್ಯಾಲಯ ಇನ್ನೂ ಉನ್ನತ ಸ್ಥಾನಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು.

ಮೈಸೂರಿನ ಸರ್ಕಾರಿ ಆಯುರ್ವೇದ ಕಾಲೇಜಿನ ಪ್ರಾಚಾರ್ಯ ಡಾ. ಕೆ.ಎಸ್. ರಾಧಾಕೃಷ್ಣ ರಾಮರಾವ್ ಮಾತನಾಡಿ, ಎವಿಎಸ್ ಆಯುರ್ವೇದ ಮಹಾವಿದ್ಯಾಲಯ ಈಗ ಸಾಕಷ್ಟು ಅಭಿವೃದ್ಧಿಯಾಗಿದೆ. ಇದನ್ನು ನೋಡಿದರೆ, ನಾನು 1984ರ ಬದಲು ಈಗ ವಿದ್ಯಾರ್ಥಿಯಾಗಿರಬೇಕಿತ್ತು ಎನಿಸುತ್ತಿದೆ ಎಂದರು.

ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಕಾಲೇಜಿನಲ್ಲಿ ನಡೆದ ಸ್ನೇಹ ಸಮಾಗಮ- 2023 ಕ್ಕೆ ಶ್ರೀಗುರು ಸಂಗನಬಸವ ಸ್ವಾಮೀಜಿ ಚಾಲನೆ ನೀಡಿದರು. ಡಾ.ಶ್ರೀಶೈಲ ಪಾಟೀಲ, ಡಾ. ಸಂಜಯ ಕಡ್ಲಿಮಟ್ಟಿ, ಡಾ. ಆರ್.ಬಿ. ಕೊಟ್ನಾಳ ಮತ್ತಿತರರಿದ್ದಾರೆ.

ಆಯುರ್ವೇದ ಕ್ಷೇತ್ರದಲ್ಲಿ ಸಂಶೋಧನೆಗೆ ಬಹಳಷ್ಟು ಅವಕಾಶಗಳಿವೆ. ವೈದ್ಯರು ಮತ್ತು ವಿದ್ಯಾರ್ಥಿಗಳು ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು. ಕಾಲೇಜಿನಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಉನ್ನತ ಸಾಧನೆ ಮಾಡಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಡಾ. ಸಂಜಯ ಕಡ್ಲಿಮಟ್ಟಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ ಶೈಕ್ಷಣಿಕ, ವೈದ್ಯಕೀಯ, ಸಂಶೋಧನೆ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ರಾಜ್ಯ ಮಟ್ಟದಲ್ಲಿ ಉತ್ತಮ ಹೆಸರು ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಹಳೆಯ ವಿದ್ಯಾರ್ಥಿಗಳು ಇಂಥ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಬಿಎಎಂಎಸ್ ಅಂತಿಮ ವರ್ಷದ ಪದವಿ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ವಿದ್ಯಾರ್ಥಿನಿ ಡಾ. ವೈಷ್ಣವಿ ಗಣೇಶಕರ ಅವರಿಗೆ ನಗದು ಬಹುಮಾನ ನೀಡಿ ಗೌರವಿಸಲಾಯಿತು. ಮುಖ್ಯ ಆಡಳಿತಾಧಿಕಾರಿ ಡಾ. ಆರ್.ಬಿ. ಕೊಟ್ನಾಳ, ಸಂಘದ ಉಪಾಧ್ಯಕ್ಷ ಡಾ. ಬಿ.ಬಿ. ಪಾಟೀಲ ಮತ್ತು 250ಕ್ಕೂ ಹೆಚ್ಚು ವೈದ್ಯರು ಉಪಸ್ಥಿತರಿದ್ದರು. ಡಾ. ಶ್ರೀಶೈಲ ಪಾಟೀಲ, ಡಾ. ಎಂ.ಎ.ಹಿರೇಮಠ, ಡಾ. ರೇಣುಕಾ ತೆನಹಳ್ಳಿ ಮತ್ತು ಡಾ. ಡಿ.ಎನ್. ಧರಿ ನಿರ್ವಹಿಸಿದರು.

ವಿ ಕೃಷಿ ಮಿತ್ರ

ಲಂಬ ಕೈತೋಟ

ಲಂಬ ಕೈತೋಟ ಮನೆ, ತೋಟದ ಸುತ್ತಮುತ್ತ ಹಾಗೂ ಮೇಲ್ಛಾವಣಿಯಲ್ಲಿ ಲಭ್ಯವಿರುವ ಜಾಗ ಬಳಸಿಕೊಂಡು ಅಪೇಕ್ಷಿತ ತರಕಾರಿ, ಹೂಗಳು ಮತ್ತು ಔಷಧ ಬೆಳೆಗಳನ್ನು ಬೆಳೆಯುವ ಕ್ರಮವಾಗಿದೆ. ಲಂಬ ಕೈತೋಟ ಮಾಡುವುದರಿಂದಾಗುವ ಅನುಕೂಲಗಳ ಕುರಿತು ವಿಜಯಪುರ ಕೃಷಿ ಮಹಾವಿದ್ಯಾಲಯ ಸಹ ವಿಸ್ತರಣಾ ನಿರ್ದೇಶಕ **ಡಾ. ರವೀಂದ್ರ ಬೆಳ್ಳಿ** ಉಪಯುಕ್ತ ಮಾಹಿತಿ ನೀಡಿದ್ದಾರೆ.

- ಲಂಬ ತೋಟವನ್ನು ರಚಿಸುವಾಗ ಪರಿಗಣಿಸಬೇಕಾದ ಅಂಶಗಳೆಂದರೆ ಟೆರೇಸ್ ಪ್ರದೇಶಕ್ಕೆ ಸೂಕ್ತವಾದ ಗಾತ್ರವನ್ನು ಹೊಂದಿರಬೇಕು. ಪ್ರತಿದಿನವು ಕುಟುಂಬದವರು ಸೇವಿಸುವ ತರಕಾರಿಗಳ ಅನುಗುಣವಾಗಿರಬೇಕು ಮತ್ತು ತರಕಾರಿಗಳು/ ಹಸಿರು ಸೊಪ್ಪು/ಹೂವುಗಳು/ಔಷಧ ಸಸ್ಯಗಳಿಗೆ ಸೂಕ್ತವಾದ ಪ್ಲಾಸ್ಟಿಕ್ ಕುಂಡಲಿಗಳ ಲಭ್ಯತೆ ಇರಬೇಕು.
- ಒಂದು ಕುಟುಂಬದ ದೈನಂದಿನ ತರಕಾರಿ/ಪೌಷ್ಟಿಕಾಂಶದ ಅವಶ್ಯಕತೆಗಳನ್ನು ಪೂರೈಸಲು ಬೇಕಾದ ತರಕಾರಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು.
- ಭೂಮಿ ಮೇಲೆ ಬೆಳೆಯಲು ಬೇಕಾಗುವ ಪ್ರದೇಶವನ್ನು ಹೋಲಿಸಿದರೆ ಲಂಬ ಉದ್ಯಾನದಲ್ಲಿ ಅರ್ಧದಷ್ಟೇ ಪ್ರದೇಶ ಸಾಕಾಗುತ್ತದೆ.
- ಲಂಬ ತೋಟದಲ್ಲಿ ಅವಶ್ಯವಿರುವ ಮೆಣಸಿನಕಾಯಿ, ಬಟಾಣಿ, ಬೀನ್ಸ್ ಮತ್ತು ಬದನೆ ತರಕಾರಿ ಬೆಳೆಗಳು, ಕೊತ್ತಂಬರಿ, ಸೊಪ್ಪು, ಪಾಲಕ ಹಸಿರು ಸೊಪ್ಪುಗಳು ಮತ್ತು ಒಂದೆಗಲ, ಅಮೃತಬಳ್ಳಿ, ಅಶ್ವಗಂಧ ಔಷಧ ಸಸ್ಯಗಳನ್ನು ಬೆಳೆಯಲು ಸೂಕ್ತವಾಗಿದೆ.

ಮಾಹಿತಿಗೆ ಮೊ: 9448418389 ಸಂಪರ್ಕಿಸಿ.

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.- 13122023-250588
CG-DL-E- 13122023-250588
असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

No. 5038] NEW DELHI, MONDAY, DECEMBER 11, 2023/ AGRAHAYANA 20,1945

ಭಾರತ ಸರ್ಕಾರದ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಇಲಾಖೆ

ಸಂ.ಎಲ್‌ಎಕ್ಯೂ/ಎನ್‌ಎಚ್-367/ರಾಹೆ/ಸಿಆರ್-/2023-24

ಅಧಿಸೂಚನೆ

ನವದೆಹಲಿ, ದಿನಾಂಕ: 11 ಡಿಸೆಂಬರ್ 2023

ಎಸ್.ಓನಂ 5267(ಇ) ಕೇಂದ್ರ ಸರ್ಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಷೆಡ್ಯೂಲನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿ ಇರುವ ಕೊಪ್ಪಳ ಜಿಲ್ಲೆಯ ಕುಕನೂರ ಹಾಗೂ ಯಲಬುರ್ಗಾ ತಾಲೂಕಿನಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ ನಂ-367 ರಲ್ಲಿ (ಬಾಣಾಪೂರ - ಗದ್ದನಕೇರಿ ಸೆಕ್ಷನ್) ಕಿಮೀ 10.00 ರಿಂದ ಕಿಮೀ 33.00 ರವರೆಗೆ ದ್ವಿಪಥ ಬೈಪಾಸ್ ರಸ್ತೆ ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂಬುದು ಕಂಡುಬಂದಿರುತ್ತದೆ. ಆದ ಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ರ ಪ್ರಕಾರ ಕಲಂ 3(ಎ) (1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂ ಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಭೂಮಾಲಿಕರು ಅಥವಾ ಯಾವುದೇ ರೀತಿಯ ಹಿತಾಸಕ್ತಿ ಹಾಗೂ ಸಾರ್ವಜನಿಕ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ 21 ದಿನಗಳೊಳಗಾಗಿ ಸದರಿ ಕಾಯ್ದೆಯ ಕಲಂ 3ಸಿ (1) ರ ಅನ್ವಯ ತಮ್ಮಗಳ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿ ಅಂದರೆ ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿ ರಾಷ್ಟ್ರೀಯ ಹೆದ್ದಾರಿಗಳು, ಧಾರವಾಡ-1 ಇವರಿಗೆ ಲಿಖಿತ ರೂಪದಲ್ಲಿ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು, ಸಕ್ಷಮಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲೀ ಅಥವಾ ಅವರ ಪರವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು

ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (196 ರ 48) ರ ಪ್ರಕಾರ ನಿಯಮ 3ಸಿ (2) ರಂತೆ ಸಕ್ಷಮ ಪ್ರಾಧಿಕಾರ ಮಾಡಿದ ಆದೇಶವು ಅಂತಿಮವಾಗಿರುತ್ತದೆ. ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿ ಉಳ್ಳವರು ಸಕ್ಷಮ ಪ್ರಾಧಿಕಾರಿಯವರ ಕಛೇರಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ವಿ.ಸೂ : ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು ಯಾವುದೇ ಕ್ರಯವಿಕ್ರಯ, ಭೋಗ್ಯ ಇತರೆ ದಸ್ತಾವೇಜುಗಳನ್ನು ಮಾಡುವಂತಿಲ್ಲ ಹಾಗೂ ಯವುದೇ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಬಾರದೆಂದು ಈ ಮೂಲಕಸೂಚಿಸಿದೆ.

ಸಹಿ/- ಇಸ್ಮಾಯಿಲ್‌ಸಾಹೇಬ ಶಿರಹಟ್ಟಿ
ವಿಶೇಷ ಭೂ ಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮಪ್ರಾಧಿಕಾರಿ
ರಾಷ್ಟ್ರೀಯ ಹೆದ್ದಾರಿಗಳು , ಧಾರವಾಡ -1

ಅನುಸೂಚಿ

ಕರ್ನಾಟಕ ರಾಜ್ಯದ ಕೊಪ್ಪಳ ಜಿಲ್ಲೆಯ ಕುಕನೂರ ಹಾಗೂ ಯಲಬುರ್ಗಾ ತಾಲೂಕಿನಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ ನಂ-367 ರಲ್ಲಿ (ಬಾಣಾಪೂರ - ಗದ್ದನಕೇರಿ ಸೆಕ್ಷನ್) ಕಿಮೀ 10.00 ರಿಂದ ಕಿಮೀ 33.00 ರವರೆಗೆ ದ್ವಿಪಥ ಬೈಪಾಸ್ ರಸ್ತೆ ನಿರ್ಮಾಣಕ್ಕಾಗಿ ಅವಶ್ಯಕವಾಗಿರುವ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ - ಇಪಿಸಿ ಮೋಡ್.

ರಾಜ್ಯ: ಕರ್ನಾಟಕ ಜಿಲ್ಲೆ: ಕೊಪ್ಪಳ

ಅ ಸಂ.	ಸರ್ವೇ / ಪ್ಲಾಟ್ ಸಂ.	ಜಮೀನಿನ ವಿವರಣೆ (ಟೈಪ್ ಆಫ್ ಲ್ಯಾಂಡ್)	ಜಮೀನಿನ ತರಹೆ	ವಿಸ್ತೀರ್ಣ (ಚದರ ಮೀಟರಗಳಲ್ಲಿ)	ವಿಸ್ತೀರ್ಣ (ಹೆಕ್ಟೇರಗಳಲ್ಲಿ)
1	2	3	4	5	6
ತಾಲೂಕ: ಯಲಬುರ್ಗಾ					ಗ್ರಾಮ: ಹೊಸಳ್ಳಿ
1	148	ಖಾಸಗಿ	ಮಿಶ್ರ	2549.07	0.254907
ತಾಲೂಕ: ಯಲಬುರ್ಗಾ					ಗ್ರಾಮ: ಯಲಬುರ್ಗಾ
2	344/1,344/3	ಖಾಸಗಿ	ಮಿಶ್ರ	49.88	0.004988
3	347	ಖಾಸಗಿ	ಮಿಶ್ರ	157.38	0.015738
4	361	ಖಾಸಗಿ	ಮಿಶ್ರ	1840.27	0.184027
5	366	ಸರ್ಕಾರಿ	ಮಿಶ್ರ	369.5	0.03695
6	531	ಖಾಸಗಿ	ಮಿಶ್ರ	342.23	0.034223
7	534	ಖಾಸಗಿ	ಮಿಶ್ರ	968.57	0.096857
8	544/2	ಖಾಸಗಿ	ಮಿಶ್ರ	507.89	0.050789
9	549/1,549/2	ಖಾಸಗಿ	ಮಿಶ್ರ	244.56	0.024456
10	551/1	ಖಾಸಗಿ	ಮಿಶ್ರ	374.22	0.037422
11	553	ಖಾಸಗಿ	ಮಿಶ್ರ	6879.56	0.687956
12	710	ಖಾಸಗಿ	ಮಿಶ್ರ	623.8	0.06238
13	719/2	ಖಾಸಗಿ	ಮಿಶ್ರ	202.34	0.020234
14	721/1	ಖಾಸಗಿ	ಮಿಶ್ರ	1968.02	0.196802
ತಾಲೂಕ: ಕುಕನೂರ					ಗ್ರಾಮ: ಹರಿಶಂಕರಬಂಡಿ
15	13/9	ಖಾಸಗಿ	ಮಿಶ್ರ	18.21	0.001821
16	26/2	ಖಾಸಗಿ	ಮಿಶ್ರ	23.4	0.00234
ತಾಲೂಕ: ಕುಕನೂರ					ಗ್ರಾಮ: ಕುಕನೂರ
17	129	ಖಾಸಗಿ	ಮಿಶ್ರ	38.36	0.003836
18	130	ಖಾಸಗಿ	ಮಿಶ್ರ	1922.23	0.192223
19	132	ಖಾಸಗಿ	ಮಿಶ್ರ	85.51	0.008551
20	142	ಖಾಸಗಿ	ಮಿಶ್ರ	7486.17	0.748617
21	143/2	ಖಾಸಗಿ	ಮಿಶ್ರ	15.34	0.001534
22	158/6	ಖಾಸಗಿ	ಮಿಶ್ರ	583.46	0.058346
23	159/1	ಖಾಸಗಿ	ಮಿಶ್ರ	308.76	0.030876
24	183	ಖಾಸಗಿ	ಮಿಶ್ರ	814.48	0.081448
25	184/1	ಖಾಸಗಿ	ಮಿಶ್ರ	31.14	0.003114
26	184/2	ಖಾಸಗಿ	ಮಿಶ್ರ	505.85	0.050585
27	215/3	ಖಾಸಗಿ	ಮಿಶ್ರ	65.93	0.006593
28	223	ಖಾಸಗಿ	ಮಿಶ್ರ	44.31	0.004431
29	244/1	ಖಾಸಗಿ	ಮಿಶ್ರ	607.02	0.060702
30	244/2	ಖಾಸಗಿ	ಮಿಶ್ರ	1618.72	0.161872
31	90/5	ಖಾಸಗಿ	ಮಿಶ್ರ	1935.08	0.193508
32	92	ಖಾಸಗಿ	ಮಿಶ್ರ	50.75	0.005075
ತಾಲೂಕ: ಕುಕನೂರ					ಗ್ರಾಮ: ರಾಜೂರ
33	112	ಖಾಸಗಿ	ಮಿಶ್ರ	12140.4	1.21404
34	139	ಖಾಸಗಿ	ಮಿಶ್ರ	202.14	0.020214
				ಒಟ್ಟು	4.557455

[F.No. RW/NH/367/KNT/2022/3A]
ABHAY JAIN, Dy. Secy.

ಇಂಡಿ ಜಿಲ್ಲೆಗೆ ಒಕ್ಕೊರಲಿನ ಹೋರಾಟ ಅವಶ್ಯ

ಮುರುಘೇಂದ್ರ ಶಿವಾಚಾರ್ಯರು

ಇಂಡಿ: ಇಂಡಿ ಜಿಲ್ಲೆಯಾದರೆ ಮುಂದೆ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಈಗಾಗಲೇ ಎಲ್ಲ ಮಠಾಧೀಶರು ಹಾಗೂ ಸಾಹಿತಿಗಳು ಸೇರಿದಂತೆ ಹಲವರು ಈ ಜಿಲ್ಲಾ ಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ. ಜಿಲ್ಲಾ ಹೋರಾಟದಲ್ಲಿ ಯಾರೂ ಸಹ ರಾಜಕೀಯ ಮಾಡಲು ಹೋಗಬಾರದು. ಏಕಪಕ್ಷೀಯ ನಿರ್ಧಾರ ಮಾಡಬಾರದು ಎಂದು ಜಿಲ್ಲಾ ಹೋರಾಟ ಸಮಿತಿಯ ಅಧ್ಯಕ್ಷ ಶಿರಶ್ಯಾಡ ಸಂಸ್ಥಾನ ಹಿರೇಮಠದ ಅಭಿನವ ಮುರುಘೇಂದ್ರ ಶಿವಾಚಾರ್ಯರು ಹೇಳಿದರು. ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಇಂಡಿಯನ್ನು ಜಿಲ್ಲೆ ಮಾಡಬೇಕೆಂದು ಹೋರಾಟ ನಡೆಸಲಾಗುತ್ತಿದೆ. ಅದಕ್ಕೆ ಬಹಳಷ್ಟು ಜನ ಬೆಂಬಲವನ್ನೂ ಸೂಚಿಸುತ್ತಿದ್ದಾರೆ. ಏನೇ ಮಾಡಿದರೂ ಸಹ ಒಂದಷ್ಟು ಜನ ಸೇರಿ ಅಭಿಪ್ರಾಯವನ್ನು ಸಂಗ್ರಹಿಸಿ ಮುಂದೆ ಹೆಜ್ಜೆ ಇಡಬೇಕು ಎಂದರು. ಗ್ರಾಮೀಣ ಭಾಗದ ಜನರು ಸಹ ಇದಕ್ಕೆ ಬೆಂಬಲ ಸೂಚಿಸಲು ಮುಂದೆ ಬರಬೇಕು. ಇದರಲ್ಲಿ ಪಕ್ಷಪಾತ ಮತ್ತು ಏಕಪಕ್ಷೀಯ ನಿರ್ಣಯ ಮಾಡಬಾರದು ಶ್ರೀಗಳು ತಿಳಿಸಿದರು.

ಶುದ್ಧ ಕ್ರಯಪತ್ರ/ಖಾತಾ ಕಳೆದಿದೆ

ನಾನು, **ಲೋಹಿತ್ ಕೆ.ಎಲ್ ಬಿನ್ ಲಕ್ಷ್ಮಣ ಗೌಡ** ಸಂ.843, 5ನೇ ಎ ಕ್ರಾಸ್, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು-560050 ವಿಳಾಸದಲ್ಲಿ ವಾಸವಾಗಿದ್ದೇನೆ. ಆದಾಗಿ, ಬೆಂಗಳೂರು ದಕ್ಷಿಣ ತಾಲೂಕು, ಕೆಂಗೇರಿ ಹೋಬಳಿ, ಕಂಬಿಪುರ ಗ್ರಾಮದ ಸರ್ವೇ ನಂ.132/1, 132/8, 137, 146 ಮತ್ತು 147ರ ಪರಿವರ್ತಿತ ಭೂಮಿಯಲ್ಲಿ ವಿಂಗಡಿಸಲ್ಪಟ್ಟಿರುವ ನಿವೇಶನಗಳ ಸ್ಕೈ ಗ್ಲೋಬಲ್ ಗಾರ್ಡನ್ ಸಿಟಿ ಎಂಬ ಲೇಔಟ್ ನಲ್ಲಿರುವ ನಿವೇಶನ ಸಂ.113 ಅನ್ನು ಖರೀದಿಸಿ, **ನಂ.ಜೆಎನ್ಆರ್-1-02005-2014-15, ಸಿಡಿ ನಂ.ಜೆಎನ್ಆರ್ಡಿ199, ದಿನಾಂಕ 20.06.2014ರಂದು** ಬೆಂಗಳೂರಿನ ಜಯನಗರ ಉಪನೋಂದಣಾಧಿಕಾರಿ ಅವರ ಕಚೇರಿಯಲ್ಲಿ ನೋಂದಾಯಿಸಲಾಗಿದ್ದ ಶುದ್ಧ ಕ್ರಯಪತ್ರ/ಖಾತಾ ಸಂ.ಬಿಡಿಎ/ಆರ್‌ಒ(ಎಸ್)/113/ಕಂಬಿಪುರ/14-15 ಅನ್ನು ಕಳೆದುಕೊಂಡಿರುತ್ತೇನೆ. ಈ ಬಗ್ಗೆ ಬೆಂಗಳೂರು ನಗರ ಪೊಲೀಸರಿಗೆ ದಿನಾಂಕ **11.12.2023**ರಂದು ಆನ್‌ಲೈನ್‌ನಲ್ಲಿ ದೂರು ಸಲ್ಲಿಸಿ, ಲಾಸ್ಟ್ ರಿಪೋರ್ಟ್ ನಂ.0843188/2023 ಪಡೆದುಕೊಂಡಿರುತ್ತೇನೆ. ಮೇಲೆ ತಿಳಿಸಿರುವ ಎಲ್ಲ ಅಂಶಗಳು ನನಗೆ ತಿಳಿದಿರುವ ಮಟ್ಟಿಗೆ ಸರಿ ಹಾಗೂ ಸತ್ಯವಾಗಿರುವುದಾಗಿ ಹೇಳಿ ದಿನಾಂಕ **11.12.2023**ರಂದು ನೋಟರಿ ರವಿ ಅವರ ಸಮ್ಮುಖದಲ್ಲಿ ಸಹಿ ಮಾಡಿರುವ ಪ್ರಮಾಣಪತ್ರದ ಮೂಲಕ ಪ್ರಾಮಾಣೀಕರಿಸಿ, ದೃಢೀಕರಿಸುತ್ತೇನೆ.

ರಂಭಾಪುರಿ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ

ದೇವರಹಿಪ್ಪರಗಿ: ಪಟ್ಟಣದ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಸೋಮವಾರ ಸಂಜೆ ಅದ್ದೂರಿಯಾಗಿ ಜರುಗಿತು.

ಚಿಕ್ಕಮಗಳೂರ ಜಿಲ್ಲೆಯ ಅರಳಳ್ಳಿಯ ಶಿವತಾಂಡವ ನೃತ್ಯ ರೂಪಕ, ಸಾಗರದ ಮಹಿಳಾ ಡೊಳ್ಳು ಕುಣಿತ ವಿಶೇಷವಾಗಿತ್ತು. 251 ಕುಂಭ ಹೊತ್ತ ಮಹಿಳೆಯರು ಪಾಲ್ಗೊಂಡಿದ್ದರು. ಅಡ್ಡಪಲ್ಲಕ್ಕಿ ಇಂಡಿ ರಸ್ತೆಯಿಂದ ಆರಂಭಗೊಂಡು ಅಂಬೇಡ್ಕರ್ ವೃತ್ತ, ಮೊಹರೆ ಹಣಮಂತರಾಯ ವೃತ್ತ, ಮೇನ್ ಬಜಾರ ಮಾರ್ಗವಾಗಿ ಶ್ರೀವೀರಭದ್ರೇಶ್ವರ ದೇವಸ್ಥಾನ ತಲುಪಿತು. ಎಮ್ಮಿಗನೂರಿನ ವಾಮದೇವ ಶ್ರೀ, ಸಗರದ ವೀರಮಹಾಂತ ಶ್ರೀಗಳು, ಸದಯ್ಯನಮಠದ ವೀರಗಂಗಾಧರ ಶ್ರೀಗಳು, ಜಡಿಮಠದ ಜಡೇಸಿದ್ಧೇಶ್ವರ ಶ್ರೀಗಳು, ಕೊಕಟನೂರಿನ ಶ್ರೀಗಳು, ಜಾತ್ರಾ ಸಮಿತಿಯ ಸಿ.ಕೆ. ಕುದರಿ, ಬಾಬುಗೌಡ ಪಾಟೀಲ(ಜಿಡ್ಡಿಮನಿ), ಬಾಳಯ್ಯ ಇಂಡಿಮಠ, ಯಲಗೂರೇಶ ದೇವೂರ, ಕಾಸು ಜಲಕತ್ತಿ, ಶಾಂತಯ್ಯ ಜಡಿಮಠ, ಬಂಡೆಪ್ಪಗೌಡ ದಿಂಡವಾರ, ಸಿದ್ದು ಆನಂದಿ, ಸೋಮಶೇಖರ ಹಿರೇಮಠ, ಆನಂದ ಜಡಿಮಠ, ವೀರಣ್ಣ ಮಣೂರ, ಪಿ.ಎಸ್. ಮಿಂಚನಾಳ, ಬಿ.ಕೆ. ಪಾಟೀಲ, ಶ್ರೀಕಾಂತ ನಾಶಿಮಠ, ಶಿವಾನಂದ ಮಸ್ತದ ಇತರರಿದ್ದರು.

ದೇವರಹಿಪ್ಪರಗಿಯಲ್ಲಿ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಸೋಮವಾರ ಸಂಜೆ ಅದ್ದೂರಿಯಾಗಿ ಜರುಗಿತು.

ಉಪಚುನಾವಣೆ ಕಣದಲ್ಲಿ 6 ಅಭ್ಯರ್ಥಿಗಳು

ಮುದ್ದೇಬಿಹಾಳ: ಪುರಸಭೆಯ 18ನೇ ವಾರ್ಡ್‌ನ ಒಂದು ಸ್ಥಾನದ ಉಪಚುನಾವಣೆಗೆ ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನವಾದ ಸೋಮವಾರ ಎಲ್ಲ 6 ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ.

ಕಾಂಗ್ರೆಸ್‌ನಿಂದ ಸಾಹೀರಾಬಾನು ಢವಳಗಿ, ಜೆಡಿಎಸ್‌ನಿಂದ ಲಾಳೇಮಶ್ಯಾಕ ನಾಯ್ಕೋಡಿ, ಆಮ್ ಆದ್ಮಿಯಿಂದ ನೂರಅಹಮ್ಮದ ಶಿವಣಗಿ, ಎಸ್‌ಡಿಪಿಐನಿಂದ ಮಹ್ಮದಸಮೀಉಲ್ಲಾ ಹುಣಚಗಿ, ಬಿಜೆಪಿಯಿಂದ ದಯಾರಾಮಸಿಂಗ್ ತುಳಜಾರಾಮ ರಾಯಚೂರ, ಪಕ್ಷೇತರರಾಗಿ ಅಬ್ದುಲ್‌ಅಜೀಜ ಢವಳಗಿ ಕಣದಲ್ಲಿ ಉಳಿದಿದ್ದಾರೆ.

ಹಿಂದಿನ ಸದಸ್ಯ ಅಲ್ಲಾಭಕ್ಷ ಢವಳಗಿ ಅವರ ನಿಧನದಿಂದ ತೆರವಾಗಿದ್ದ ಈ ಸ್ಥಾನಕ್ಕೆ ಅವರ ಪತ್ನಿ ಸಾಹೀರಾಬಾನು ಅವರನ್ನು ಪಕ್ಷದಿಂದ ಕಣಕ್ಕಿಳಿಸಿ ಅಲ್ಲಾಭಕ್ಷರ ಸಹೋದರ ಅಬ್ದುಲ್‌ಅಜೀಜ ಅವರನ್ನು ಕಣದಿಂದ ಹಿಂದೆ ಸರಿಸುವ ಪ್ರಯತ್ನಗಳು ಫಲ ನೀಡಲಿಲ್ಲ. ಶಾಸಕ ಸಿ.ಎಸ್. ನಾಡಗೌಡರ ಮನವೊಲಿಕೆಯೂ ಕೆಲಸ ಮಾಡಲಿಲ್ಲ.

ಮಳ್ಳಿಯಲ್ಲಿ ಇಂದು ಶಿವಾನುಭವ ಧರ್ಮಸಭೆ

ಬ್ರಹ್ಮದೇವನಮಡು: ಸಮೀಪದ ಮಳ್ಳಿ ಗ್ರಾಮದ ಹಿರೇಮಠದ ಲಿಂ. ಸಿದ್ಧಲಿಂಗ ಶಿವಾಚಾರ್ಯರ 28ನೇ ಪುಣ್ಯಾರಾಧನೆ ಅಂಗವಾಗಿ ಡಿ. 19ರಂದು ರಾತ್ರಿ 9ಕ್ಕೆ ಶಿವಾನುಭವ ಧರ್ಮಸಭೆ ನಡೆಯಲಿದೆ ಎಂದು ಶ್ರೀಮಠದ ರುದ್ರಮುನಿ ಶಿವಾಚಾರ್ಯರು ತಿಳಿಸಿದ್ದಾರೆ.

ಮಾಗಣಗೇರಾ ಬೃಹನ್ಮಠದ ಡಾ. ವಿಶ್ವಾರಾಧ್ಯ ಶಿವಾಚಾರ್ಯರು, ಗುರುಲಿಂಗ ಶಿವಾಚಾರ್ಯರು ಸಾನ್ನಿಧ್ಯ ವಹಿಸುವರು. ಸೂಗುರೇಶ್ವರ ಶಿವಾಚಾರ್ಯರು ಅಧ್ಯಕ್ಷತೆ ವಹಿಸುವರು. ಅಭಿನವ ರುದ್ರಮುನಿ ಶಿವಾಚಾರ್ಯರು ಸಮ್ಮುಖ ವಹಿಸುವರು. ಮಳ್ಳಿ -ನಾಗರಹಳ್ಳಿ ಹಿರೇಮಠದ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸುವರು. ಶಾಸಕ ಡಾ. ಅಜಯಸಿಂಗ್ ಧರ್ಮಸಭೆ ಉದ್ಘಾಟಿಸುವರು. ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ, ಕೇದಾರಲಿಂಗಯ್ಯ ಹಿರೇಮಠ, ಬಸವರಾಜಯ್ಯ ಶಾಸ್ತ್ರಿಗಳು, ಡಾ. ಸಂತೋಷ ನವಲಗುಂದ, ಶಿವಶರಣಪ್ಪ ಸೀರಿ, ಶಾಂತಗೌಡ ಪಾಟೀಲ, ರಾಜಶೇಖರ ಸೀರಿ, ದಂಡಪ್ಪಸಾಹು ಕುರಳಗೇರಾ, ಗುರುಶರಣ ಪಾಟೀಲ, ರೇವಣಸಿದ್ಧಪ್ಪ ಸಂಕಾಲಿ, ಆರ್.ವಿ. ಅವಿನಾಶ, ಭೀಮರಾಯಗೌಡ ಮಾಗಣಗೇರಾ, ತಾಪಂ ಮಾಜಿ ಸದಸ್ಯ ಮಲ್ಲನಗೌಡ ಪಾಟೀಲ, ಗ್ರಾಪಂ ಅಧ್ಯಕ್ಷೆ ಖಾದರಬಿ ಗುಡಿಮನಿ, ಭೀಮರಾಯ ಪೂಜಾರಿ ಭಾಗವಹಿಸುವರು.

ಭಾರತೀಯ ಸ್ಟೇಟ್ ಬ್ಯಾಂಕ್

ಅಧಿಕೃತ ಅಧಿಕಾರಿಗಳ ವಿವರಗಳು: ಹೆಸರು : ಶ್ರೀಮತಿ ವಾಣಿಶ್ರೀ ಉಮೇಶ್ ಉಮರಾಣಿ ಇಮೇಲ್ ಐಡಿ: sbi.00819@sbi.co.in ಮೊಬೈಲ್ ನಂ : 9449364738	ಶಾಖೆಯ ವಿಳಾಸ : ಮುಖ್ಯ ಶಾಖೆ, ವಿಜಯಪುರ - 586 101.

ಅಪೆಂಡಿಕ್ಸ್ IV-A [ಪ್ರಾವಿಷೋನ್ 8(6)ರ ಅಡಿಯಲ್ಲಿ]
ಸ್ಥಿರಾಸ್ತಿಯ ಮಾರಾಟಕ್ಕಾಗಿ ಸೂಚನೆ

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ಸೆಕ್ಯೂರಿಟಿ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 8(6)ರ ನಿಬಂಧನೆಗಳನ್ನು ಓದಿಕೊಂಡಂತೆ ಇದರನ್ವಯ ಸ್ಥಿರಾಸ್ತಿಯ ಇ-ಹರಾಜು ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಈ ಕೆಳಗೆ ವಿವರಿಸಿರುವ ಭದ್ರತಾ ಸಾಲದಾತರಿಗೆ ಅಡಮಾನ/ ಚಾರ್ಜ್ ಮಾಡಿರುವ ಸ್ಥಿರಾಸ್ತಿಯನ್ನು ಭಾರತೀಯ ಸ್ಟೇಟ್ ಬ್ಯಾಂಕ್, ಭದ್ರತಾ ಸಾಲ ಕೊಟ್ಟವರು ಇವರ ಅಧಿಕೃತ ಅಧಿಕಾರಿಯವರು ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿದ್ದು ಅವುಗಳನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ" ಆಧಾರದ ಮೇಲೆ ಭದ್ರತಾ ಸಾಲ ಕೊಟ್ಟ ಭಾರತೀಯ ಸ್ಟೇಟ್ ಬ್ಯಾಂಕ್ ಇವರಿಗೆ **ಶ್ರೀ ಶರಣಗೌಡ ಹನುಮಂತರಾಯ ಪಾಟೀಲ್** ಬಿನ್ ಹನುಮಂತರಾಯ ಪಾಟೀಲ್, ವಿಳಾಸ : ಸೇನಾನಗರ, ಶಿವಾಲಯ ದೇವಸ್ಥಾನದ ಹತ್ತಿರ, ಅಲ್-ಅಮೀನ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ಎದುರು ಮತ್ತು ಅಥಣಿ ರಸ್ತೆ, ವಿಜಯಪುರ-586102. ಇವರಿಂದ ಬರಬೇಕಾದ ದಿನಾಂಕ 04.11.2022 ರಂದು ಇದ್ದಂತೆ ಬಾಕಿ ಮೊತ್ತ **ರೂ. 55,46,477/-** (ರೂಪಾಯಿ ಐವತ್ತೈದು ಲಕ್ಷದ ನಲವತ್ತಾರು ಸಾವಿರದ ನಾನೂರ ಎಪ್ಪತ್ತೇಳು ಮಾತ್ರ) + ಬಡ್ಡಿ, ಜೊತೆಗೆ ವಿಚ್ಚ, ವೆಚ್ಚ ಇತ್ಯಾದಿಗಳ ವಸೂಲಿಗಾಗಿ ಅಡಮಾನು ಮಾಡಿರುವ ಸ್ಥಿರಾಸ್ತಿಯನ್ನು **ದಿನಾಂಕ : 22.12.2023** ರಂದು ಇ-ಹರಾಜು ಮಾರಾಟ ಮಾಡಲಾಗುತ್ತಿದೆ. ಮೀಸಲು ಬೆಲೆ, ಮುಂಗಡ ಠೇವಣಿ ಮತ್ತು ಬಿಡ್ ಗುಣಾಂಕದ ವಿವರಗಳು ಈ ಕೆಳಗಿನಂತಿವೆ. **ಇ-ಹರಾಜು ದಿನಾಂಕ ಮತ್ತು ಸಮಯ : 22.12.2023ರಂದು ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆವರೆಗೆ** ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ : **21.12.2023**

ಮೀಸಲು ಬೆಲೆ (ಈ ಮೊತ್ತಕ್ಕಿಂತ ಕಡಿಮೆ ಬೆಲೆಗೆ ಸ್ವತ್ತನ್ನು ಮಾರಾಟ ಮಾಡಲಾಗುವುದಿಲ್ಲ)	ಮುಂಗಡ ಠೇವಣಿ	ಬಿಡ್ ಏರಿಕೆಯ ಮೊತ್ತ
ರೂ. 64,27,000/-	ರೂ. 6,50,000/-	ರೂ. 50,000/-

ಸ್ಥಿರಾಸ್ತಿಯ ವಿವರಗಳು : ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಂತೆ ವಾಸಯೋಗ್ಯ ಮನೆ ಕಟ್ಟಿರುವ ಪ್ಲಾಟ್ ನಂ. 38/ಹೆಚ್, ಪ್ಲಾಟ್ ನಂ. 41, ವಿಸ್ತೀರ್ಣ 2324 ಚದರ ಅಡಿ, ನವರಸಪುರ, ಸೇನಾನಗರ, ಅಲ್-ಅಮೀನ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ಎದುರು, ಅಥಣಿ ರಸ್ತೆ, ವಿಜಯಪುರ. ಚಕ್ಕುಬಂದಿ : **ಪೂರ್ವಕ್ಕೆ** : 9 ಮೀಟರ್ ರಸ್ತೆ, **ಪಶ್ಚಿಮಕ್ಕೆ** : ಪ್ಲಾಟ್ ನಂ. 33, **ಉತ್ತರಕ್ಕೆ** : ಪ್ಲಾಟ್ ನಂ. 40, **ದಕ್ಷಿಣಕ್ಕೆ** : ಪ್ಲಾಟ್ ನಂ. 42.

ಅಧಿಕೃತ ಅಧಿಕಾರಿಯವರ ಅತ್ಯುತ್ತಮ ಮಾಹಿತಿ ಅನುಸಾರ ಯಾವುದೇ ಋಣಭಾರಗಳು ಇರುವುದಿಲ್ಲ. ಹರಾಜಿನ ಹೆಚ್ಚಿನ ಮಾಹಿತಿಗಾಗಿ : **M/s. C1 India Pvt. Ltd. https://www.bankeauctions.com** ಇವರನ್ನು ಸಂಪರ್ಕಿಸಬಹುದು.

ಸ್ಥಿರ ಭದ್ರತೆಯ ಸ್ವತ್ತುಗಳನ್ನು ಮಾರಾಟ ಮಾಡಬೇಕಾದ ದಿನಾಂಕ ಮತ್ತು ಸಮಯ ಮತ್ತು ಉದ್ದೇಶಿತ ಬಿಡ್ದಾರ್‌ಗಳು, ಸ್ವತ್ತುಗಳು ಮತ್ತು ಅವುಗಳ ನಿರ್ದಿಷ್ಟತೆಯ ಬಗ್ಗೆ ತಮ್ಮನ್ನು ತಾವು ತೃಪ್ತಿಪಡಿಸಿಕೊಳ್ಳಬೇಕು. ಎಲ್ಲಾ ಕೆಲಸದ ದಿನಗಳಂದು ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆಯೊಳಗೆ ಪೂರ್ವ ನೇಮಕಾತಿಯೊಂದಿಗೆ ಸಂಪರ್ಕಿಸಿ ಅಧಿಕೃತ ಅಧಿಕಾರಿ : ಕಲ್ಯಾಣ ರಿಕವರಿ ಏಜೆನ್ಸಿ, ಶ್ರೀ ಚಂದ್ರಕಾಂತ, ಮೊಬೈಲ್ ನಂ. 9448094390.

ದಿನಾಂಕ : 18.12.2023
ಸ್ಥಳ : ವಿಜಯಪುರ

ಅಧಿಕೃತ ಅಧಿಕಾರಿಗಳು
ಭಾರತೀಯ ಸ್ಟೇಟ್ ಬ್ಯಾಂಕ್

ICICI Home Finance
ಕಾರ್ಪೊರೇಟ್ ಕಚೇರಿ: ಐಸಿಐಸಿಐ ಹೋಂ ಫೈನಾನ್ಸ್ ಕಂಪನಿ ಲಿಮಿಟೆಡ್, ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ-400059, ಭಾರತ.
ಶಾಖಾ ಕಚೇರಿ: 1ನೇ ಮಹಡಿ, ಡಾ. ಸವಿತಾ ಕಮರ್ಷಿಯಲ್ ಕಾಂಪ್ಲೆಕ್ಸ್, ಐಡಿಯಾ ಶೋರೂಂ ಮೇಲೆ, 2/907/23/2, ಬಸವೇಶ್ವರ ಆಸ್ಪತ್ರೆಯ ಎದುರು, ಸೇಡಂ ರಸ್ತೆ, ಕಲಬುರಗಿ-585 105.

(ನಿಯಮ 8(6)ರ ಷರತ್ತುಗಳನ್ನು ನೋಡುವುದು)
ಸ್ಥಿರಾಸ್ತಿಗಳ ಮಾರಾಟ ಪ್ರಕಟಣೆ

ಆರ್ಥಿಕ ಸ್ವತ್ತುಗಳ ಭದ್ರತಾ ಹಿತಾಸಕ್ತಿ ಮತ್ತು ಮರುನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ಒಳಗಾಗಿದೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ನಿಯಮ 8(6) ಷರತ್ತುಗಳಿಗೆ ಒಳಪಟ್ಟಂತೆ ಇ-ಹರಾಜು ಮೂಲಕ ಸ್ವತ್ತುಗಳ ಮಾರಾಟದ ಪ್ರಕಟಣೆ.
ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಜಾಮೀನುದಾರ(ರು) ಅವರಿಗೆ ಈ ನೋಟಿಸ್ ಅನ್ನು ಜಾರಿ ಮಾಡಲಾಗಿದ್ದು, ಈ ಕೆಳಗೆ ವಿವರಿಸಲಾಗಿರುವ ಸ್ವತ್ತುಗಳನ್ನು ಭದ್ರತಾ ಸಾಲ ವಿತರಕರ ಪರವಾಗಿ, ಐಸಿಐಸಿಐ ಹೋಂ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುವ ಸ್ವತ್ತುಗಳನ್ನು ''ಎಲ್ಲಿದೆಯೋ ಹಾಗೆ', ಮತ್ತು ''ಹೇಗಿದೆಯೋ ಹಾಗೆ' ಹಾಗೂ ''ಏನಿದೆಯೋ ಎಲ್ಲವೂ ಒಳಗೊಂಡಂತೆ" ಈ ಕೆಳಗೆ ನೀಡಿರುವ ಮಾಹಿತಿಗಳ ಆಧಾರದ ಮಾರಾಟ ಮಾಡಲಾಗುವುದು.

ಕ್ರ. ಸಂ	ಸಾಲಗಾರ(ರು)/ಸಹ-ಸಾಲಗಾರರು/ ಜಾಮೀನುದಾರರ/ಕಾನೂನು ಉತ್ತರಾಧಿಕಾರಿಗಳ ಹೆಸರು ಸಾಲ ಖಾತೆ ಸಂ.	ಋಣಭಾರಗಳೊಂದಿಗೆ, ಯಾವುದಾದರೂ ಇದ್ದಲ್ಲಿ ಭದ್ರತಾ ಆಸ್ತಿ(ಗಳ) ವಿವರಗಳು	ಬಾಕಿ ಮೊತ್ತ	ಮೀಸಲು ಬೆಲೆ ಭದ್ರತಾ ಹಣ ಠೇವಣಿ	ಆಸ್ತಿ ಪರಿಶೀಲನೆಯ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(A)	(B)	(C)	(D)	(E)	(F)	(G)
1.	ರಮೇಶ್ ಚನ್ನಬಸಪ್ಪ ಜಾಂಕರ್ (ಸಾಲಗಾರರು) ಸತೀಶ್ ಜಾಂಕರ್ (ಸಹಸಾಲಗಾರರು) ಸಾಲ ಖಾತೆ ಸಂ. NHBIJ00000813741	ವಿಜಯಪುರ ಉಪನೋಂದಣಾಧಿಕಾರಿ ಅವರ ವ್ಯಾಪ್ತಿಗೆ ಬರುವ ವಿಜಯಪುರ ಟೌನ್ ಮುನ್ಸಿಪಲ್ ವ್ಯಾಪ್ತಿಯಲ್ಲಿರುವ ವಿಜಯಪುರದ ಮಹಾಲಬಾಗ್ಯಾತ್ ಗ್ರಾಮದಲ್ಲಿರುವ ಪ್ಲಾಟ್ ಸಂ.60, ಮರು ಸರ್ವೇ ಸಂ.873/2ಬಿ+2ಸಿಯಲ್ಲಿ ನಿರ್ಮಿಸಲ್ಪಟ್ಟಿದೆ.	ರೂ. 10,86,319/- ಡಿಸೆಂಬರ್ 07, 2023	ರೂ. 22,16,160/- ರೂ. 2,21,620/-	ಡಿಸೆಂಬರ್ 21, 2023ರ ಬೆಳಗ್ಗೆ 11.00ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ	ಜನವರಿ 05, 2024ರ ಮಧ್ಯಾಹ್ನ 2 ಗಂಟೆಯಿಂದ 3 ಗಂಟೆಯವರೆಗೆ

ನಮ್ಮ ಹರಾಜು ಸಂಸ್ಥೆ **ಗ್ಲೋಬ್ ಟೆಕ್**‌ನ ಜಾಲತಾಣದ **(URL Link- https://BestAuctionDeal.com)** ಮೂಲಕ ಆನ್‌ಲೈನ್‌ನಲ್ಲಿ ಹರಾಜು ಮಾಡಲಾಗುವುದು. **ಜನವರಿ 04, 2024ರ ಸಂಜೆ 5.00 ಗಂಟೆ**ಯೊಳಗಾಗಿ ಮುಂದುವರೆದ ಬಡ್ಡಿ ಸಹಿತ ಒಟ್ಟು ಬಾಕಿಯನ್ನು ಪಾವತಿಸುವಂತೆ ಅಡಮಾನದಾರರಿಗೆ ಕೊನೆಯ ಅವಕಾಶ ನೀಡುವುದಾಗಿ ಈ ಮೂಲಕ ಸೂಚಿಸಲಾಗುತ್ತದೆ. ತಪ್ಪಿದ್ದಲ್ಲಿ, ಈ ಮೇಲ್ಕಾಣಿಸಿದ ವೇಳಾಪಟ್ಟಿಯನ್ವಯ ಆಸ್ತಿಗಳನ್ನು ಮಾರಾಟ ಮಾಡಲಾಗುವುದು.
ಬಿಡ್ದಾರ(ಗಳು) ಆರ್‌ಟಿಜಿಎಸ್ / ಹುಂಡಿ (ಡಿಡಿ) ಮೂಲಕ ಇಎಮ್‌ಡಿಯನ್ನು (ಕಾಲಂ ಇ ಅನ್ನು ನೋಡುವುದು) ಐಸಿಐಸಿಐ ಹೋಂ ಫೈನಾನ್ಸ್ ಕಂಪನಿ ನಿಯಮಿತ, 1ನೇ ಮಹಡಿ, ಡಾ. ಸವಿತಾ ಕಮರ್ಷಿಯಲ್ ಕಾಂಪ್ಲೆಕ್ಸ್, ಐಡಿಯಾ ಶೋರೂಂ ಮೇಲೆ, 2/907/23/2, ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಕಲಬುರಗಿ-585105 ವಿಳಾಸಕ್ಕೆ **ಜನವರಿ 04, 2024ರ ಸಂಜೆ 4.00 ಗಂಟೆ**ಯೊಳಗೆ ಸಲ್ಲಿಸಬೇಕು. ಬಿಡ್ದಾರ(ಗಳು) ಕೇಂದ್ರಕ್ಕೆ ಅರ್ಜಿ ಮತ್ತು ಬಿಡ್ ನಿಯಮ ಹಾಗೂ ನಿಬಂಧನೆಗಳ ಅರ್ಜಿಗಳಿಗೆ ಸಹಿ ಹಾಕಿ ಐಸಿಐಸಿಐ ಹೋಂ ಫೈನಾನ್ಸ್ ಕಂಪನಿ ನಿಯಮಿತ, 1ನೇ ಮಹಡಿ, ಡಾ.. ಸವಿತಾ ಕಮರ್ಷಿಯಲ್ ಕಾಂಪ್ಲೆಕ್ಸ್, ಐಡಿಯಾ ಶೋರೂಂ ಮೇಲೆ, 2/907/23/2, ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಕಲಬುರಗಿ-585105 ವಿಳಾಸಕ್ಕೆ **ಜನವರಿ 04, 2024ರ ಸಂಜೆ 5.00 ಗಂಟೆ**ಯೊಳಗೆ ಸಲ್ಲಿಸತಕ್ಕದ್ದು, ಯಾವುದೇ ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ''**ಐಸಿಐಸಿಐ ಹೋಂ ಫೈನಾನ್ಸ್ ಕಂಪನಿ ಲಿಮಿಟೆಡ್.-ಆಕ್ಷನ್**' ಹೆಸರಿನಲ್ಲಿ ವಿಜಯಪುರದಲ್ಲಿ ನಗದು ಆಗುವಂತೆ ಇಎಂಡಿ ಮೊತ್ತದ ಹುಂಡಿಯನ್ನು ತೆಗೆಯಬೇಕು.
ಪರಿಶೀಲನೆ, ಹರಾಜಿನ ನಿಯಮ ಮತ್ತು ನಿಬಂಧನೆಗಳು ಅಥವಾ ಬಿಡ್ ಸಲ್ಲಿಕೆ ಕುರಿತು ಸ್ಪಷ್ಟನೆ ಅಗತ್ಯವಿದ್ದಲ್ಲಿ, ದಯವಿಟ್ಟು **ಐಸಿಐಸಿಐ ಹೋಂ ಫೈನಾನ್ಸ್ ಕಂಪನಿ ಲಿಮಿಟೆಡ್** ಅನ್ನು 9920807300 ಅನ್ನು ಅಥವಾ ನಮ್ಮ ಸೇಲ್ಸ್ ಮತ್ತು ಮಾರ್ಕೆಟಿಂಗ್ ಪಾಲುದಾರ **ನೆಕ್ಸ್‌ಜೆನ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್** ಅನ್ನು ಸಂಪರ್ಕಿಸಬಹುದು.
ಸಲ್ಲಿಕೆಯಾಗುವ ಯಾವುದೇ ಬಿಡ್ ಅನ್ನು ಅಥವಾ ಎಲ್ಲ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಅಧಿಕೃತ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ.
ಮಾರಾಟದ ನಿಯಮ ಮತ್ತು ನಿಬಂಧನೆಗಳ ಕುರಿತ ವಿಸ್ತೃತ ಮಾಹಿತಿಗಾಗಿ ದಯವಿಟ್ಟು https://www.icicihfc.com/ ಗೆ ಭೇಟಿ ಕೊಡಿ.

ದಿನಾಂಕ : ಡಿಸೆಂಬರ್ 19, 2023
ಸ್ಥಳ : ವಿಜಯಪುರ

ಅಧಿಕೃತ ಅಧಿಕಾರಿ
ಐಸಿಐಸಿಐ ಹೋಂ ಫೈನಾನ್ಸ್ ಕಂಪನಿ ಲಿಮಿಟೆಡ್

ಸತ್ಯ, ನ್ಯಾಯಕ್ಕೆ ಯಾವತ್ತಿಗೂ ಸೋಲಿಲ್ಲ

ಮುದ್ದೇಬಿಹಾಳ: ಭಾರತ ದೇಶದ ಅಧ್ಯಾತ್ಮದ ಮಹತ್ವ ಅದ್ವಿತೀಯ. ನಮ್ಮ ಮಠಗಳು, ಶರಣರು, ವಚನ ಸಾಹಿತ್ಯ, ಭಗವದ್ಗೀತೆ, ಶರಣ ಸಾಹಿತ್ಯ, ಋಷಿ ಮುನಿಗಳ ಸಂದೇಶ ಭಾರತದ ಬಹುದೊಡ್ಡ ಆಸ್ತಿಗಳಾಗಿವೆ. ಇವುಗಳನ್ನು ಕಳ್ಳತನ ಮಾಡುವುದು ಸಾಧ್ಯವೇ ಇಲ್ಲ ಎಂದು ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಹೇಳಿದರು.



ಎ.ಎಸ್. ಪಾಟೀಲ ನಡಹಳ್ಳಿ

ಇಲ್ಲಿನ ವಿಬಿಸಿ ಪ್ರೌಢಶಾಲೆ ಮೈದಾನದಲ್ಲಿರುವ ಶ್ರೀ ಸಿದ್ದೇಶ್ವರ ಸ್ವಾಮೀಜಿ ವೇದಿಕೆಯಲ್ಲಿ ಧಾರವಾಡ ಜಿಲ್ಲೆ ಉಪ್ಪಿನ ಬೆಟಗೇರಿಯ ಮೂರುಸಾವಿರ ವಿರಕ್ತ ಮಠದ ಪೂಜ್ಯ ಕುಮಾರ ವಿರೂಪಾಕ್ಷ ಸ್ವಾಮೀಜಿಯವರು ನಡೆಸಿಕೊಡುತ್ತಿರುವ ಪ್ರವಚನದಲ್ಲಿ ಸೋಮವಾರ ರಾತ್ರಿ ನಡೆದ ಬಸವಣ್ಣನ ಕಲ್ಯಾಣೋತ್ಸವ, ಸಾಮೂಹಿಕ ವಿವಾಹ ಸಮಾರಂಭದಲ್ಲಿ ಅವರು ಮಾತನಾಡಿದರು.

ಭರತಖಂಡ ಹುಟ್ಟಿದಂದಿನಿಂದ ಇವತ್ತಿನವರೆಗೆ ಶರಣರಿಗೆ, ಪ್ರಾಮಾಣಿಕ ರೀತಿಯಲ್ಲಿ ನಡೆದಂಥ ವ್ಯಕ್ತಿಗಳಿಗೆ ಸಮಾಜದಲ್ಲಿ ಸೋಲು, ಕಷ್ಟ ಕಾಡುತ್ತಿರುತ್ತದೆ. ಆದರೆ ಸತ್ಯಕ್ಕೆ, ನ್ಯಾಯಕ್ಕೆ ಯಾವತ್ತಿಗೂ ಸೋಲಿಲ್ಲ. ಇದಕ್ಕೆ ಬಸವಣ್ಣನೇ ಸಾಕ್ಷಿ. ಬಸವಣ್ಣ ಒಂದು ಕಡೆ ಆಧ್ಯಾತ್ಮದ ಪ್ರತೀಕವಾದ ಲಿಂಗದಾರಿಯಾಗಿದ್ದರೆ ಮಗದೊಂದು ಕಡೆ ಸೊಂಟಕ್ಕೆ ಕತ್ತಿ ಸಿಕ್ಕಿಸಿಕೊಂಡ ಕ್ರಾಂತಿಕಾರಿಯಾಗಿ ಕಾಣುತ್ತಾನೆ. ಆದರೆ ಅವರು ಸದಾ ಅಧ್ಯಾತ್ಮದ ಕಡೆಗೆ ನಡೆದಿರುವುದರಿಂದ ಅನ್ಯಾಯ, ಅತ್ಯಾಚಾರ ಎದುರಿಸುವ ಕೆಲಸವನ್ನು ಅವತ್ತಿನ ಶರಣರು ಅಹಿಂಸೆಯಿಂದಲೇ ಎದುರಿಸುವ ಕೆಲಸವನ್ನು ಮಾಡಿದ್ದರು. ಹಾಗಾಗಿಯೇ ಶರಣರ ಕ್ರಾಂತಿಗೆ ಸೋಲಾಯಿತು. ಆದರೆ ಅವತ್ತು ಭೌತಿಕ ಸೋಲಾಗಿತ್ತೇ ಹೊರತು ವೈಚಾರಿಕತೆಗೆ, ನಂಬಿಕೆ ಆದರ್ಶಗಳಿಗೆ ಸೋಲಾಗಿರಲಿಲ್ಲ. ಶರಣರ ಆಲೋಚನೆಗಳಿಗೆ ಯಾವತ್ತೂ ಸೋಲಾಗುವುದಿಲ್ಲ ಎಂದರು.

ಅಸ್ಕಿ ಫೌಂಡೇಷನ್ ಅಧ್ಯಕ್ಷ ಸಿ.ಬಿ. ಅಸ್ಕಿ ಕೊಣ್ಣೂರ ಮಾತನಾಡಿ, ಮುದ್ದೇಬಿಹಾಳ ನಗರ ಸೌಹಾರ್ದತೆಯ ಸಂಕೇತವಾಗಿದ್ದು ಪುರಾಣ ಪ್ರವಚನ ಪಕ್ಷಾತೀತ, ಜಾತ್ಯಾತೀತ ಕಾರ್ಯಕ್ರಮವಾಗಿದೆ. ಇದರಲ್ಲಿ ಸಂಘಟಕರ ಶ್ರಮ ಎದ್ದು ಕಾಣುತ್ತದೆ ಎಂದು ಶ್ಲಾಘಿಸಿದರು.

ವೈ.ಎಚ್. ವಿಜಯಕರ್ ಮಾತನಾಡಿದರು. ಬಿಜೆಪಿ ಧುರೀಣ ಎಂ.ಎಸ್. ಪಾಟೀಲ, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಅಬ್ದುಲ್ ಗಫೂರಸಾಬ ಮಕಾನದಾರ, ಎಪಿಎಂಸಿ ವರ್ತಕ ಎಚ್.ಟಿ. ಬಿರಾದಾರ, ವೀವಿವ ಸಂಘದ ಕಾರ್ಯಾಧ್ಯಕ್ಷ ಎಂ.ಎಸ್. ನಾವದಗಿ ವಕೀಲರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ಪುರಸಭೆ ಸದಸ್ಯ ಮಹಿಬೂಬ ಗೊಳಸಂಗಿ, ಡಾ. ವಿಜಯಕುಮಾರ ನಾಯಕ ವೇದಿಕೆಯಲ್ಲಿದ್ದರು.

ರತ್ನಮ್ಮ ಬಸನಗೌಡ ದೇವೂರ ದಂಪತಿಯ ಪುತ್ರ ಸಂಜೀವಕುಮಾರ ಮತ್ತು ಅನ್ನಮಕ್ಕಗೌಡತಿ ಶಂಕರಗೌಡ ಪಾಟೀಲರ ಪುತ್ರಿ ಗುರುಬಾಯಿ ಅವರ ವಿವಾಹದ ನಿಮಿತ್ತ ವೇದಿಕೆಗೆ ಕರೆಸಿ ಕಲ್ಯಾಣೋತ್ಸವ ನಡೆಸಿ ಸರ್ವರಿಂದಲೂ ಸಾಮೂಹಿಕವಾಗಿ ಅಕ್ಷತೆ ಹಾಕಿಸಿ ಸ್ವಾಮೀಜಿಯವರು ಹಾರೈಸಿದರು. ಕಿರುತೆರೆಯ ಹಾಸ್ಯ ಕಲಾವಿದ ಶ್ರೀಶೈಲ ಹೂಗಾರ ಕಾರ್ಯಕ್ರಮ ನಿರ್ವಹಿಸಿದರು.

> ಜನ ಜಾಗೃತರಾಗಬೇಕು. ನಮ್ಮ ಕರ್ತವ್ಯ ಪ್ರಾಮಾಣಿಕವಾಗಿ ಮಾಡಬೇಕು. ಬಹಳ ಅದ್ಭುತ ಸಂದೇಶ ಕೊಡುತ್ತಿರುವ ಪೂಜ್ಯರು ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹರಸಿದ್ದಾರೆ. ಈಗ ಅಭಿವೃದ್ಧಿ ಕೆಲಸ ನಿಂತಿದೆ. ಐದು ವರ್ಷಗಳ ನಂತರ ಮತ್ತೆ ಅಭಿವೃದ್ಧಿ ಕೆಲಸ ಮುಂದುವರಿಸ್ತೇನೆ. ಮುಂದಿನ ದಿನಗಳಲ್ಲಿ ನಾವು ನೀವು ಸೇರಿ ನಗರವನ್ನು ಇನ್ನೂ ಹೆಚ್ಚು ಅಭಿವೃದ್ಧಿಯತ್ತ ಕೊಂಡೊಯ್ಯೋಣ.
>
> **| ಎ.ಎಸ್. ಪಾಟೀಲ ನಡಹಳ್ಳಿ** ಮಾಜಿ ಶಾಸಕರು, ಉದ್ಯಮಿ.

> ನಡಹಳ್ಳಿಯವರು ಈ ನಗರವನ್ನು ಮುದ್ದುಮುದ್ದಾಗಿ ಸಿಂಗರಿಸಿದ್ದಾರೆ. ಜೀವನದಲ್ಲಿ ಲಕ್ಷ್ಮೀಯನ್ನು (ಸಂಪತ್ತು) ಒಪ್ಪಿಕೊಳ್ಳಬೇಕು. ಸರಸ್ವತಿಯನ್ನು (ವಿದ್ಯೆ) ಅಪ್ಪಿಕೊಳ್ಳಬೇಕು. ಇವರಿಬ್ಬರೂ ಕರೆಯದೆ ಬರುವ ಅತಿಥಿಗಳಿದ್ದಂತೆ. ಲಕ್ಷ್ಮೀ ನಮ್ಮಿಂದ ದೂರಾಗಬಹುದು ಆದರೆ ಸರಸ್ವತಿ ಎಂದಿಗೂ ದೂರಾಗುವುದಿಲ್ಲ.
>
> **| ಕುಮಾರ ವಿರೂಪಾಕ್ಷ ಸ್ವಾಮೀಜಿ** ಪ್ರವಚನಕಾರರು, ಉಪ್ಪಿನಬೆಟಗೇರಿ ಮೂರು ಸಾವಿರ ವಿರಕ್ತ ಮಠ, ಧಾರವಾಡ.